**All India Radio: Bangalore**
**National Bulletin In Kannada**
**11.08.2025  07.35 a.m.**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**<><><><>**

ಮುಖ್ಯಾಂಶಗಳು

1. ಪ್ರಧಾನಿ ನರೇಂದ್ರ ಮೋದಿ ಅವರಿಂದ ನವದೆಹಲಿಯಲ್ಲಿಂದು ಸಂಸದರಿಗಾಗಿ ನಿರ್ಮಾಣಗೊಂಡ ೧೮೪ ಬಹುಮಹಡಿ ವಸತಿ ಗೃಹಗಳ ಉದ್ಘಾಟನೆ
2. ರಾಜಸ್ಥಾನದಲ್ಲಿಂದು ೩೦ ಲಕ್ಷಕ್ಕೂ ಹೆಚ್ಚು ರೈತರಿಗೆ ವಿಮಾ ಪರಿಹಾರ ವಿತರಿಸಲಿರುವ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್
3. ಮತಗಳ್ಳತನ ಆರೋಪ ಕುರಿತು ದಾಖಲೆ ನೀಡುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಕರ್ನಾಟಕದ ಮುಖ್ಯ ಚುನಾವಣಾಧಿಕಾರಿ ನೋಟಿಸ್
4. ಗಾಜಾ ವಶ ಕುರಿತ ಇಸ್ರೇಲ್ ನಿರ್ಧಾರದ ಬಗ್ಗೆ ವಿಶ್ವಸಂಸ್ಥೆ ಭದ್ರತಾ ಮಂಡಳಿ ಸಭೆಯಲ್ಲಿ ಚರ್ಚೆ
5. ಹತ್ತೊಂಬತ್ತು ವರ್ಷದೊಳಗಿನವರ ಏಷ್ಯಾನ್ ಬಾಕ್ಸಿಂಗ್ ಚಾಂಪಿಯನ್ ಶಿಪ್ : ಭಾರತದ ನಿಶಾ ಮತ್ತು ಮುಸ್ಕಾನ್‌ಗೆ ಚಿನ್ನದ ಪದಕ

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದು ನವದೆಹಲಿಯ ಬಾಬಾ ಖರಕ್ ಸಿಂಗ್ ಮಾರ್ಗದಲ್ಲಿ ಸಂಸದರಿಗಾಗಿ ನಿರ್ಮಾಣಗೊಂಡಿರುವ ೧೮೪ ಹೊಸ ಮಾದರಿ-೭ ಬಹುಮಹಡಿ ವಸತಿ ಗೃಹಗಳ ಉದ್ಘಾಟನೆ ನೆರವೇರಿಸಲಿದ್ದಾರೆ. ಈ ಸಂದರ್ಭದಲ್ಲಿ ಪ್ರಧಾನಮಂತ್ರಿ ಸಿಂಧೂರ ಮರದ ಸಸಿಯನ್ನು ನೆಡುವರು. ಬಳಿಕ ಅವರು ಅಲ್ಲಿನ ಕಾರ್ಮಿಕರೊಂದಿಗೆ ಸಂವಾದ ನಡೆಸಿ, ಸಾರ್ವಜನಿಕರನ್ನುದ್ದೇಶಿಸಿ ಭಾಷಣ ಮಾಡುವರು.

ಈ ಕುರಿತು ಒಂದು ವರದಿ : ಅಭಯ್ (೪೮ ಸೆಕೆಂಡ್‌ಗಳು)

ಈ ವಸತಿ ಸಂಕೀರ್ಣ ಸಂಸದರ ಅಗತ್ಯಗಳಿಗೆ ತಕ್ಕಂತೆ ಎಲ್ಲ ಆಧುನಿಕ ಸೌಲಭ್ಯಗಳನ್ನು ಒಳಗೊಂಡಿದೆ. ಇದರಲ್ಲಿ ಇಂಧನ ಉಳಿತಾಯ, ನವೀಕರಿಸಬಹುದಾದ ಇಂಧನ ಉತ್ಪಾದನೆ ಮತ್ತು

ಪರಿಣಾಮಕಾರಿ ತ್ಯಾಜ್ಯ ನಿರ್ವಹಣೆಗೆ ಸಹಕಾರಿಯಾದ ಸುಧೃಢ ಮತ್ತು ಪರಿಸರ ಸ್ನೇಹಿ ವೈಶಿಷ್ಟ್ಯಗಳನ್ನು ಅಳವಡಿಸಲಾಗಿದೆ. ವಿಶೇಷಚೇತನರಿಗೆ ಅನುಕೂಲವಾಗುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿರುವ ಈ ಸಂಕೀರ್ಣ ಎಲ್ಲರಿಗೂ ಅನುಕೂಲವಾಗುವ ವಿನ್ಯಾಸದ ನಿದರ್ಶನವಾಗಿದೆ. ಸಂಸದರು ತಮ್ಮ ಸಾರ್ವಜನಿಕ ಜವಾಬ್ದಾರಿಗಳನ್ನು ನೆರವೇರಿಸಲು ಸಹಾಯಕವಾಗುವಂತೆ ಕಚೇರಿ ಸ್ಥಳ, ಸಿಬ್ಬಂದಿಗೆ ವಸತಿ ಮತ್ತು ಸಮುದಾಯ ಕೇಂದ್ರಕ್ಕಾಗಿ ಪ್ರತ್ಯೇಕ ಜಾಗವನ್ನು ಮೀಸಲಿರಿಸಲಾಗಿದೆ. ಸಂಕೀರ್ಣದ ಕಟ್ಟಡಗಳನ್ನು ನವೀನ ಭೂಕಂಪನ ನಿರೋಧಕ ತಂತ್ರಜ್ಞಾನವನ್ನು ಆಧಾರವಾಗಿಟ್ಟುಕೊಂಡು ನಿರ್ಮಿಸಲಾಗಿದ್ದು, ಎಲ್ಲಾ ನಿವಾಸಿಗಳ ಭದ್ರತೆಗಾಗಿ ಸಮಗ್ರ ಹಾಗೂ ಬಲಿಷ್ಠ ಭದ್ರತಾ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

<><><><>

ಪ್ರಧಾನಿ ನರೇಂದ್ರ ಮೋದಿ ಅವರು, ಆಪರೇಷನ್ ಸಿಂಧೂರ್‌ನ ಯಶಸ್ಸಿಗೆ, ಅತ್ಯಾಧುನಿಕ ತಂತ್ರಜ್ಞಾನ ಮತ್ತು ರಕ್ಷಣಾ ಉತ್ಪಾದನೆಯಲ್ಲಿ ಮೇಕ್ ಇನ್ ಇಂಡಿಯಾ ಉಪಕ್ರಮದ ಶಕ್ತಿ ಕಾರಣ ಎಂದು ಹೇಳಿದ್ದಾರೆ. ಬೆಂಗಳೂರಿನಲ್ಲಿ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ದೇಶದ ಸಶಸ್ತ್ರ ಪಡೆಗಳು, ಗಡಿಯುದ್ದಕ್ಕೂ ಭಯೋತ್ಪಾದಕ ಅಡಗುತಾಣಗಳನ್ನು ನಾಶಪಡಿಸಿ, ಪಾಕಿಸ್ತಾನವನ್ನು ಹಿಮ್ಮೆಟ್ಟುವಂತೆ ಮಾಡಿದ್ದರಿಂದ, ಇಡೀ ಜಗತ್ತು, ನವ ಭಾರತದ ಹೊಸ ಮುಖವನ್ನು ನೋಡುವಂತಾಯಿತು ಎಂದು ಹೇಳಿದರು. ಬೆಂಗಳೂರು, ಭಾರತವನ್ನು ಜಾಗತಿಕ ಐಟಿ ನಕ್ಷೆಯಲ್ಲಿ ಇರಿಸಿದೆ, ವಿಕಸಿತ ಭಾರತದ ದೃಷ್ಟಿಕೋನವನ್ನು ಸಾಕಾರಗೊಳಿಸಲು ಉದಯೋನ್ಮುಖ ತಂತ್ರಜ್ಞಾನಗಳು ಮತ್ತು ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರಬೇಕು ಎಂದು ಕರೆ ನೀಡಿದರು.

ಧ್ವನಿ : ಪ್ರಧಾನಿ ನರೇಂದ್ರ ಮೋದಿ (೨೭ ಸೆಕೆಂಡ್‌ಗಳು)

ಬೆಂಗಳೂರು ಮೆಟ್ರೋದ ಹಳದಿ ಮಾರ್ಗವನ್ನು ಉದ್ಘಾಟಿಸಿದ ಬಳಿಕ, ಹಂತ-೩ಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಇದೇ ವೇಳೆ ಪ್ರಧಾನಿ ಅವರು, ಮೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಹಸಿರು ನಿಶಾನೆ ತೋರಿದರು.

<><><><>

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಇಂದು ರಾಜಸ್ಥಾನದ ಜುಂಜುನುವಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ, ೩೦ ಲಕ್ಷಕ್ಕೂ ಹೆಚ್ಚು ರೈತರಿಗೆ, ೩ ಸಾವಿರದ ೨೦೦ ಕೋಟಿ

ರೂಪಾಯಿಗಳಿಗೂ ಹೆಚ್ಚಿನ ಮೌಲ್ಯದ ಬೆಳೆ ವಿಮಾ ಪರಿಹಾರಗಳನ್ನು ವಿತರಿಸಲಿದ್ದಾರೆ. ಪಾವತಿಗಳನ್ನು ನೇರ ನಗದು ವರ್ಗಾವಣೆ ಮೂಲಕ, ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗುವುದು ಎಂದು ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ ತಿಳಿಸಿದೆ. ಈ ಕಾರ್ಯಕ್ರಮದಲ್ಲಿ, ಮಧ್ಯಪ್ರದೇಶದ ರೈತರು, ಒಂದು ಸಾವಿರದ ೧೫೬ ಕೋಟಿ ರೂಪಾಯಿ, ರಾಜಸ್ಥಾನದ ರೈತರು ಒಂದು ಸಾವಿರದ ೧೨೧ ಕೋಟಿ, ಛತ್ತೀಸ್‌ಗಢದ ರೈತರು ೧೫೦ ಕೋಟಿ ಮತ್ತು ಇತರ ರಾಜ್ಯಗಳ ರೈತರು ೭೭೩ ಕೋಟಿ ರೂಪಾಯಿಗಳನ್ನು ನೇರವಾಗಿ ಪಡೆಯುತ್ತಾರೆ. ಈ ಕಾರ್ಯಕ್ರಮದಲ್ಲಿ ಜುಂಜುನು, ಸಿಕಾರ್, ಜೈಪುರ, ಕೋಟ್‌ಪುಟ್ಲಿ-ಬೆಹ್ರೋರ್ ಮತ್ತು ಇತರ ಜಿಲ್ಲೆಗಳ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದ್ದು, ದೇಶಾದ್ಯಂತ ವಿವಿಧ ರಾಜ್ಯಗಳಿಂದ ಲಕ್ಷಾಂತರ ರೈತರು ವರ್ಚುವಲ್ ಮೂಲಕ ಭಾಗವಹಿಸಲಿದ್ದಾರೆ.

<><><><>

೨೦೨೪ ರ ಲೋಕಸಭಾ ಚುನಾವಣೆಯಲ್ಲಿ ಮತಗಳ್ಳತನವಾಗಿದೆ ಎಂಬ ಆರೋಪಕ್ಕೆ ದಾಖಲೆಗಳನ್ನು ಕೋರಿ, ಕರ್ನಾಟಕದ ಮುಖ್ಯ ಚುನಾವಣಾ ಅಧಿಕಾರಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ನೋಟಿಸ್ ಜಾರಿ ಮಾಡಿದ್ದಾರೆ. ಶಕುನ್ ರಾಣಿ ಅಥವಾ ಬೇರೆ ಯಾರಾದರೂ ಎರಡು ಬಾರಿ ಮತ ಚಲಾಯಿಸಿದ್ದಾರೆ ಎಂಬ ತಮ್ಮ ಹೇಳಿಕೆಯನ್ನು ಆಧರಿಸಿದ ಪುರಾವೆಗಳನ್ನು ಒದಗಿಸುವಂತೆ ರಾಹುಲ್ ಗಾಂಧಿ ಅವರನ್ನು ಕೇಳಲಾಗಿದೆ. ಕರ್ನಾಟಕದ ಸಿಇಒ, ವಿ ಅನ್ಬುಕುಮಾರ್ ನಿನ್ನೆ ಹೊರಡಿಸಿದ ನೋಟಿಸ್‌ನಲ್ಲಿ, ಸಿಇಒ ಕಚೇರಿಯ ಪ್ರಾಥಮಿಕ ವಿಚಾರಣೆಯಲ್ಲಿ, ಶಕುನ್ ರಾಣಿ ಒಮ್ಮೆ ಮಾತ್ರ ಮತ ಚಲಾಯಿಸಿದ್ದಾರೆ ಎಂದು ಕಂಡುಬಂದಿದೆ, ರಾಹುಲ್ ಗಾಂಧಿ ತಮ್ಮ ಪ್ರಸ್ತುತಿಯಲ್ಲಿ ತೋರಿಸಿದ ಟಿಕ್ ಗುರುತು ಮಾಡಿದ ದಾಖಲೆ, ಮತಗಟ್ಟೆ ಅಧಿಕಾರಿ ನೀಡಿದ ದಾಖಲೆಯಲ್ಲ ಎಂದು ತಿಳಿದುಬಂದಿದೆ ಎಂದು ಹೇಳಿದ್ದಾರೆ. ಇದೇ ೭ ರಂದು ನವದೆಹಲಿಯಲ್ಲಿ ನಡೆದ ಪತ್ರಿಕಾಗೋಷ್ಠಿಯ ನಂತರ ರಾಹುಲ್ ಗಾಂಧಿ, ಕರ್ನಾಟಕದ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದ ಮತಗಳ್ಳತನ ನಡೆದಿದೆ ಎಂದು ಆರೋಪಿಸಿದ್ದರು. ಚುನಾವಣಾ ಆಯೋಗ, ನಿಯಮಗಳ ಪ್ರಕಾರ ಔಪಚಾರಿಕ ಘೋಷಣೆಯನ್ನು ಸಲ್ಲಿಸುವಂತೆ ಅಥವಾ ಸುಳ್ಳು ಆರೋಪಗಳನ್ನು ಮಾಡಿದ್ದಕ್ಕಾಗಿ ದೇಶಕ್ಕೆ ಕ್ಷಮೆಯಾಚಿಸುವಂತೆ ರಾಹುಲ್ ಗಾಂಧಿ ಅವರನ್ನು ಈ ಹಿಂದೆ ಕೇಳಿತ್ತು.

<><><><>

ಸೇನಾ ಕಾರ್ಯಾಚರಣೆಯನ್ನು ವಿಸ್ತರಿಸಿ ಗಾಜಾ ಪ್ರದೇಶದಲ್ಲಿ ನಿಯಂತ್ರಣ ಸ್ಥಾಪಿಸುವ ಇಸ್ರೇಲ್ ನಿರ್ಧಾರ ಹಾಗೂ ಅದಕ್ಕೆ ವ್ಯಕ್ತವಾಗಿರುವ ತೀವ್ರ ಅಂತಾರಾಷ್ಟ್ರೀಯ ಟೀಕೆಯ ನಡುವೆ ಈ ಕುರಿತಂತೆ ಚರ್ಚಿಸಲು ವಿಶ್ವಸಂಸ್ಥೆ ಭದ್ರತಾ ಮಂಡಳಿ ನಿನ್ನೆ ತುರ್ತು ಸಭೆ ನಡೆಸಿತು. ವಿವಿಧ ಐರೋಪ್ಯ ಸದಸ್ಯರ ಮನವಿಯ ಮೇರೆಗೆ ನಡೆದ ಈ ಸಭೆಯಲ್ಲಿ ಹದಗೆಡುತ್ತಿರುವ ಮಾನವೀಯ ಬಿಕ್ಕಟ್ಟು ಮತ್ತು ಎರಡು ದಶಲಕ್ಷ ಗಾಜಾ ನಿವಾಸಿಗಳಿಗೆ ಮತ್ತು ಉಳಿದ ಒತ್ತೆಯಾಳುಗಳಿಗೆ ಎದುರಾಗಬಹುದಾದ ಪರಿಸ್ಥಿತಿಗಳ ಕುರಿತು ಸಮಾಲೋಚನೆ ನಡೆಸಲಾಯಿತು. ಕಳೆದ ಶುಕ್ರವಾರ ಇಸ್ರೇಲ್‌ನ ಭದ್ರತಾ ಸಚಿವ ಸಂಪುಟ ಗಾಜಾ ನಗರವನ್ನು ವಶಪಡಿಸಿಕೊಳ್ಳುವ ಪ್ರಧಾನಿ ಬೆಂಜಮಿನ್ ನೇತನ್ಯಾಹು ಅವರ ಯೋಜನೆಗೆ ಅನುಮತಿ ನೀಡಿದ್ದು, ಈ ನಿರ್ಧಾರ ಜಾಗತಿಕ ಟೀಕೆಗೆ ಗುರಿಯಾಗಿದ್ದು, ಇದೊಂದು ಅಪಾಯಕಾರಿ ಬೆಳವಣಿಗೆ ಎಂದು ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಆಂಟೋನಿ ಗುಟೆರಸ್ ಹೇಳಿದ್ದಾರೆ. ವಿಶ್ವಸಂಸ್ಥೆ ಸಹಾಯಕ ಪ್ರಧಾನಕಾರ್ಯದರ್ಶಿ ಮಿರೋಸ್ಲಾವ್ ಜೆನ್ಕಾ, ಭದ್ರತಾ ಮಂಡಳಿಯನ್ನುದ್ದೇಶಿಸಿ ಮಾತನಾಡಿ, ಗಾಜಾ ಪ್ರದೇಶದಲ್ಲಿ ಪರಿಸ್ಥಿತಿ ಸಹಿಸಲಾಗದ ಮಟ್ಟಕ್ಕೆ ತಲುಪಿದೆ. ಈ ಕಾರ್ಯಾಚರಣೆ ಮುಂದುವರೆದರೆ ಭಯಾನಕ ಪರಿಣಾಮಗಳಿಗೆ ಕಾರಣವಾಗಬಹುದು ಎಂದು ಹೇಳಿದ್ದಾರೆ. ಮಂಡಳಿ ಸದಸ್ಯರಲ್ಲಿ ಭಿನ್ನ ಮತವಿದ್ದು, ಫ್ರಾನ್ಸ್, ಬ್ರಿಟನ್ ಮತ್ತು ಮತ್ತಿತರ ರಾಷ್ಟ್ರಗಳು ಇಸ್ರೇಲ್‌ನ ನಡೆಯನ್ನು ಅಂತಾರಾಷ್ಟ್ರೀಯ ಮಾನವೀಯ ಕಾನೂನುಗಳ ಉಲ್ಲಂಘನೆ ಎಂದು ಎಚ್ಚರಿಸಿದ್ದರೆ, ಅಮೆರಿಕ ತಟಸ್ಥ ನಿಲುವು ತಾಳಿದೆ. ಸಮಸ್ಯೆ ಇರುವುದು ಹಮಾಸ್‌ನೊಂದಿಗೆ ಎಂದಿರುವ ಅಮೆರಿಕ ಎಲ್ಲಾ ಒತ್ತೆಯಾಳುಗಳನ್ನು ಬಿಡುಗಡೆ ಮಾಡಬೇಕೆಂದು ಹಮಾಸ್‌ಗೆ ಒತ್ತಾಯಿಸಿದೆ.

<><><><>

ವಿವಿಧ ಸಮುದಾಯಗಳ ನಡುವಿನ ಸಾಮರಸ್ಯವನ್ನು ಬಲಪಡಿಸುವ ನಿಟ್ಟಿನಲ್ಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘ ಆರ್‌ಎಸ್‌ಎಸ್ ತನ್ನ ಶತಮಾನೋತ್ಸವದ ಪ್ರಯುಕ್ತ ಸೆಪ್ಟೆಂಬರ್ ೧೨ರಂದು ಇಂದೋರ್‌ನ ಬ್ರಿಲಿಯಂಟ್ ಸಮುದಾಯ ಭವನದಲ್ಲಿ ಮಹತ್ವದ ಸಮಾಜ ಸಾಮರಸ್ಯ ಸಮ್ಮೇಳನವನ್ನು ಆಯೋಜಿಸಲು ಮುಂದಾಗಿದೆ. ಈ ಸಮ್ಮೇಳನದಲ್ಲಿ ಮಾಲ್ವಾ ಪ್ರಾಂತ್ಯದ ೧ಲಂಕ್ಕೂ ಹೆಚ್ಚು ಸಮುದಾಯದ ಪ್ರಮುಖರು ಭಾಗವಹಿಸುವಿಕೆ ನಿರೀಕ್ಷಿಸಲಾಗಿದೆ. ಸಮ್ಮೇಳನದ ಅಧ್ಯಕ್ಷತೆಯನ್ನು ಆರೆಸ್ಸೆಸ್‌ನ ಸರಸಂಘಚಾಲಕ ಡಾ. ಮೋಹನ್ ಭಾಗವತ್ ವಹಿಸಲಿದ್ದಾರೆ. ಈ

ಸಮ್ಮೇಳನದಲ್ಲಿ ‘ಪಂಚ ಪರಿವರ್ತನ’ ಎಂಬ ಆರೆಸ್ಸೆಸ್‌ನ ಪರಿಕಲ್ಪನೆಯಡಿ ಐದು ಪ್ರಮುಖ ಬದಲಾವಣೆಗಳ ಕುರಿತು ಚರ್ಚೆ ನಡೆಯಲಿದೆ.

<><><>

ಬ್ಯಾಂಕಾಕ್‌ನಲ್ಲಿ ನಿನ್ನೆ ನಡೆದ ೧೯ ವರ್ಷದೊಳಗಿನವರ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ, ಭಾರತದ ಯುವ ಮಹಿಳಾ ಬಾಕ್ಸರ್‌ಗಳಾದ ನಿಶಾ ಮತ್ತು ಮುಸ್ಕಾನ್ ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಂಡರು ಇವರೊಂದಿಗೆ ಐದು ಮಂದಿ ಬೆಳ್ಳಿ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ೫೪ ಕೆಜಿ ವಿಭಾಗದಲ್ಲಿ, ನಿಶಾ, ಚೀನಾದ ಸಿರುಯಿ ಯಾಂಗ್ ವಿರುದ್ಧ ೪-೧ ಅಂತರದಲ್ಲಿ ಜಯಗಳಿಸಿದರೆ, ೫೭ ಕೆಜಿ ವಿಭಾಗದಲ್ಲಿ ಮುಸ್ಕಾನ್, ೩-೨ ಅಂತರದಲ್ಲಿ ಕಝಾಕಿಸ್ತಾನ್‌ನ ಅಯಾಝಾನ್ ಎರ್ಮೆಕ್ ಅವರನ್ನು ಮಣಿಸಿದರು. ೭೫ ಕೆಜಿ ವಿಭಾಗದಲ್ಲಿ ಆರ್ತಿ ಕುಮಾರಿ, ೮೦ ಕೆಜಿ ವಿಭಾಗದಲ್ಲಿ ಕೃತಿಕಾ ವಾಸನ್ ಮತ್ತು ೮೦ ಪ್ಲಸ್ ವಿಭಾಗದಲ್ಲಿ ಪಾರ್ಚಿ ಟೋಕಾಸ್ ಬೆಳ್ಳಿ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ. ಪುರುಷರ ಫೈನಲ್‌ನಲ್ಲಿ, ರಾಹುಲ್ ಕುಂಡು, ೭೫ ಕೆಜಿ ವಿಭಾಗದಲ್ಲಿ ಉಜ್ಬೆಕ್‌ನ ಮುಹಮ್ಮದ್‌ಜಾನ್ ಯಾಕುಪ್‌ಬೋವೆಕ್ ವಿರುದ್ಧ ಜಯಗಳಿಸಿದ್ದಾರೆ.

<><><>